ಆ) ಈ ಯೋಜನೆಯ ಜಲಮೂಲವನ್ನು ದೃಢೀಕರಿಸದ ಕಾರಣ ಈ ಯೋಜನೆಯನ್ನು ಪ್ರಾರಂಭಿಸಲು ಆಗಿರಲಿಲ್ಲ. ಈಗ ಘಂಟೆಗೆ ೧೧,೯೮೮ ಲೀಟರ್ ಉತ್ಪತ್ತಿ ಇರುವ ಕೊಳವೆ ಬಾವಿಯನ್ನು ಜಲಮೂಲವಾಗಿ ದೃಢೀಕರಿಸಿದ್ದು ಇತರೆ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಶಹಾಪುರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗಾಗಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು ಕಟ್ಟಿಸಿರುವ ಮನೆಗಳ ಬಗ್ಗೆ

ಶ್ರೀ ಬಿ.ಜಿ. ಶ್ರೀ ಶಿವಶೇಖರಪ್ಪಗೌಡ (ಶಹಾಪುರ).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು ಶಹಾಪುರದಲ್ಲಿ ಆರ್ಥಿಕವಾಗಿ ಹಿಂದುಳಿದ ವರಿಗಾಗಿ ನಿರ್ಮಾಸಲಾಗಿಟ್ಟಿರುವ ದುರಂಗಿ ಮುರುಂಗಿ (ಊರು ಮೂರಿ) ಜನಾಂಗದವರಿಗೆ ಹಂಚಿರುವ ಮನೆಗಳೆಷ್ಟು ?

ಆ) ಈ ಮನೆಗಳನ್ನು ಮಂಜೂರು ಮಾಡಿ ಅವರಿಂದ ತುಂಬಿಸಿಕೊಳ್ಳಲಾಗಿರುವ ಹಣವೆಷ್ಟು?

ಇ) ಈ ದುರಗಿ ಮುರಗಿ ಜನಾಂಗದವರು ಉಳಿದ ಹಣ ತುಂಬಲಂ ಆಗದಿರುವುದರಿಂದ ಸರ್ಕಾರದವರಂ ಈ ಹಣ ಪಡೆಯಂವುದನ್ನು ಮನ್ನಾ ಮಾಡುವರೆ?

ಶ್ರೀ ಮೊಹಮ್ಮದ್‌ಮೊಯಿನುದ್ದೀನ್ (ರಾಜ್ಯ ವಸತಿ ಸಚಿವರು).—

ಅ) ಗುಲ್ಬರ್ಗಾ ಜಿಲ್ಲೆಯ ಶಹಾಪುರ ಪಟ್ಟಣದಲ್ಲಿ ಹುಡ್ಕೋ ನೆರವಿನಿಂದ ೪೩ ಮನೆಗಳನ್ನು ಆರ್ಥಿಕ ದುರ್ಬಲ ವರ್ಗದವರಿಗಾಗಿ ಕಟ್ಟಿಸಿ ಅವುಗಳ ಪೈಕಿ ೨೦ ಮನೆಗಳನ್ನು ದುರುಗಿ ಮುರುಗಿ ಎಂಬ ಜನಾಂಗದವರಿಗೆ ಹಂಚಿಕೆ ಮಾಡಲಾಗಿದೆ.

ಆ) ಹಂಚಿಕೆದಾರರಿಂದ ೧,೩೦೦ ರೂಪಾಯಿಗಳನ್ನು ಮುಂಗಡ ಠೇವಣಿಯನ್ನಾಗಿ ತುಂಬಿಸಿ ಕೊಳ್ಳಲಾಗಿದೆ.

ಇ) ಮಂಡಳಿಯಿಂದ ನಿರ್ಮಾಣ ಮಾಡಿ ಹಂಚಿದ ಮನೆಗಳಿಗೆ ಪಾವತಿ ಮಾಡಬೇಕಾದ ಹಣವನ್ನು ಮನ್ನಾ ಮಾಡಲು ಮಂಡಳಿಯ ಹಂಚಿಕೆಯ ನಿಯಮಾವಳಿಯಲ್ಲಿ ಅವಕಾಶವಿಲ್ಲದಿರುವುದರಿಂದ ಈ ಹಣವನ್ನು ಮನ್ನಾ ಮಾಡಲು ಸಾಧ್ಯವಿಲ್ಲ.

ಜಿಲ್ಲಾ ಪರಿಷತ್‌ನ ವಿವಿಧ ಇಲಾಖೆಯಲ್ಲಿರುವ ಸಿಬ್ಬಂದಿ ಬಗ್ಗೆ

೨೪೩೬. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ಪಕ್ಷೇತರ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳಲ್ಲಿ ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ವರ್ಗವಾರು ವಿವರ ನೀಡುವುದು)

ಆ) ಈ ಕೊರತೆಯನ್ನು ನೀಗಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ಪಕ್ಷೇತರ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತು ವ್ಯಾಪ್ತಿಯಲ್ಲಿನ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ೧೯೪ ಹುದ್ದೆಗಳು ಖಾಲಿ ಇರುತ್ತದೆ. ಅನುಬಂಧ 'ಅ'ನಲ್ಲಿ ವರ್ಗವಾರು ವಿವರ ನೀಡಿದೆ.

ಆ) ಖಾಲಿ ಇರುವ ಹುದ್ದೆಗಳಿಗೆ ಆಯಾಯ ಇಲಾಖೆಗಳು ತಮಗೆ ಸಂಬಂಧಪಟ್ಟ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲು ಸೂಕ್ತ ಕ್ರಮ ಕೈಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ.